ಕೊಡುತ್ತೇನೆ.

ಆಡಳಿತದಲ್ಲಿ ಕನ್ನಡ ಭಾಷೆ ಜಾರಿ

(280) 2704

ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್(ಚಾಮರಾಜ): ಮಾನ್ಯ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರಾರಂಭವಾದದ್ದು ಎಂದಿನಿಂದ; ಇದುವರೆಗೆ ಯಾರು ಯಾರು ಈ ಇಲಾಖೆಯ ಸಚಿವರಾಗಿದ್ದರು?

ಆ) ಆಡಳಿತದಲ್ಲಿ ಕನ್ನಡ ಜಾರಿಗೊಳಿಸುವ ಬಗ್ಗೆ ಇಲಾಖೆ ಪ್ರಾರಂಭಗೊಂಡಾಗಿನಿಂದ ಕೈಗೊಂಡ ಕ್ರಮಗಳೇನು? ಕನ್ನಡ ಜಾರಿಗೊಳಿಸುವ ಬಗ್ಗೆ ಇದುವರೆವಿಗೆ ಎಷ್ಟು ಸುತ್ತೋಲೆಗಳನ್ನು ಎಂದೆಂದು ಹೊರಡಿಸಲಾಗಿದೆ?

ಇ) ಈ ಸುತ್ತೋಲೆಗಳಂತೆ ಕಾರ್ಯ ನಿರ್ವಹಿಸದ ಅಧಿಕಾರಿಗಳು ಯಾರು ಯಾರು ಇವರುಗಳ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಈ) ಸರ್ಕಾರ ಆಡಳಿತದಲ್ಲಿ ಸಂಪೂರ್ಣ ಕನ್ನಡ ಜಾರಿ ಕುರಿತು ಕೈಗೊಳ್ಳಲಾಗಿರುವ ಕ್ರಮಗಳೇನು?

ಶ್ರೀಮತಿ ರಾಣಿ ಸತೀಶ್ (ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು):

ಅ) 1) ದಿನಾಂಕ 31-8-1977 ರಿಂದ ಪ್ರಾರಂಭವಾಗಿದೆ.

2) ಕನ್ನಡ ಮತ್ತು ಸಂಸ್ಕೃತಿ ಇಲಾಖಾ ಸಚಿವರ ವಿವರ:

1. ಶ್ರೀ ಕೆ.ಹೆಚ್.ಶ್ರೀನಿವಾಸ್
2. ಶ್ರೀ ಆರ್.ಗುಂಡೂರಾವ್
3. ಡಾ: ಜೀವರಾಜ ಆಳ್ವ
4. ಶ್ರೀ ಎಂ.ಪಿ.ಪ್ರಕಾಶ್
5. ಶ್ರೀ ಕೆ.ಹೆಚ್.ರಂಗನಾಥ್

6. ಶ್ರೀ ಎಂ.ವೀರಪ್ಪ ಮೊಯ್ಲಿ

7. ಶ್ರೀ ಎಸ್.ರಮೇಶ್

8. ಶ್ರೀ ಹೆಚ್.ವಿಶ್ವನಾಥ್

9. ಶ್ರೀ ಆರ್.ಎನ್.ನಾಯ್ಕ

10. ಶ್ರೀಮತಿ ಬಿ.ಟಿ.ಲಲಿತಾ ನಾಯಕ್

11. ಶ್ರೀ ಎಂ.ಪಿ.ಪ್ರಕಾಶ್

12. ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್

13. ಶ್ರೀ ಶಿವಣ್ಣ ಎಂ.

14. ಶ್ರೀಮತಿ ರಾಣಿ ಸತೀಶ್ (ಈಗ)

ಆ) 1. ಅನುಬಂಧದಲ್ಲಿ ವಿವರ ಒದಗಿಸಿದೆ.

2. 1963ರಿಂದ 2000ದವರೆಗೆ ಸುಮಾರು 300 ಸುತ್ತೋಲೆಗಳನ್ನು ಹೊರಡಿಸಲಾಗಿದೆ.

ಇ) ಪೂರ್ಣ ಪ್ರಮಾಣದಲ್ಲಿ ದೈನಂದಿನ ಆಡಳಿತದಲ್ಲಿ ಕನ್ನಡವನ್ನು ಬಳಕೆ ಮಾಡದ ಸಿಬ್ಬಂದಿ ಅಧಿಕಾರಿಗಳಿಗೆ ಪೂರ್ಣ ಪ್ರಮಾಣದಲ್ಲಿ ಕನ್ನಡವನ್ನು ಬಳಕೆ ಮಾಡಬೇಕೆಂದು ಸೂಚಿಸಲಾಗಿದೆ.

ಈ) ಪ್ರಾಧಿಕಾರ ಈ ಕೆಳಕಂಡಂತೆ ಕ್ರಮ ಕೈಗೊಂಡಿದೆ.

ಆಡಳಿತದಲ್ಲಿ ಸಂಪೂರ್ಣವಾಗಿ ಕನ್ನಡವನ್ನು ಅನುಷ್ಠಾನ ಮಾಡುತ್ತಿರುವ ಬೇರೆ ಬೇರೆ ಇಲಾಖೆಗಳು ಕೈಗೊಂಡಿರುವ ಕ್ರಮಗಳನ್ನು ಪರಿಶೀಲಿಸಲಾಗುತ್ತಿದೆ. ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಜಾರಿಗೆ ತರುವಲ್ಲಿ ಇರುವ ಅಡಚಣೆಗಳನ್ನು ಗುರುತಿಸಿ ಅವುಗಳ ನಿವಾರಣೆಗೆ ಕ್ರಮ ಕೈಗೊಳ್ಳಲಾಗುತ್ತಿದೆ. ಆಡಳಿತದಲ್ಲಿ ಗಣಕ ಯಂತ್ರಗಳನ್ನು ಬಳಸುತ್ತಿರುವಲ್ಲಿ ಅವುಗಳಲ್ಲಿ ಕನ್ನಡವನ್ನು ಬಳಸುವುದು ಹೇಗೆ ಎಂಬ ಬಗ್ಗೆ ಮೈಸೂರು ದಸರಾ ವಸ್ತು ಪ್ರದರ್ಶನದಲ್ಲಿ ಎರಡು ವರ್ಷ ಪ್ರಾತ್ಯಕ್ಷಿಕೆಯನ್ನು ಏರ್ಪಡಿಸಿದೆ. ಜಿಲ್ಲಾ ಮಟ್ಟದಲ್ಲಿ ಸಭೆಗಳನ್ನು ನಡೆಸುವ ಮೂಲಕ ಕನ್ನಡ ಅನುಷ್ಠಾನ ಕುರಿತು ಪರಿಶೀಲನೆ ನಡೆಸಲಾಗುತ್ತಿದೆ. ಜನವರಿ 2000ದಲ್ಲಿ ಹೊಸ ಪ್ರಾಧಿಕಾರವು ಅಸ್ತಿತ್ವಕ್ಕೆ ಬಂದಿದ್ದು ಆಡಳಿತದಲ್ಲಿ ಕನ್ನಡವನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವ ಬಗ್ಗೆ ಸರ್ಕಾರದ ಎಲ್ಲಾ ಕಾರ್ಯದರ್ಶಿಗಳಿಗೆ ಮುಖ್ಯಸ್ಥರಿಗೆ ಸೂಚನೆಯನ್ನು ನೀಡಲಾಗಿದೆ. ಕೆ.ಎಸ್.ಆರ್.ಟಿ.ಸಿ

ಮತ್ತು ಕೆ.ಪಿ.ಸಿ. ಸೇರಿದಂತೆ ಕೆಲವು ಪ್ರಮುಖ ನಿಗಮ, ಮಂಡಳಿಗಳಿಗೆ ಭೇಟಿ ನೀಡಿ ಕನ್ನಡ ಅನುಷ್ಠಾನದ ಬಗ್ಗೆ ಪರಿಶೀಲನೆ ನಡೆಸಲಾಗಿದೆ ಮತ್ತು ಕನ್ನಡ ವಾತಾವರಣವನ್ನು ನಿರ್ಮಿಸಲು ಕಾರ್ಯನಿರ್ವಹಿಸುತ್ತಿದೆ.

ಅನುಬಂಧ

ಆಡಳಿತದಲ್ಲಿ ಕನ್ನಡ ಜಾರಿಗೊಳಿಸುವ ಬಗ್ಗೆ ಇಲಾಖೆಯು ಕೆಳಕಂಡ ವಿವಿಧ ಯೋಜನೆಗಳನ್ನು ಹಮ್ಮಿಕೊಂಡಿದೆ.

1. ಅಧಿಕಾರಿ: ಸಿಬ್ಬಂದಿಗೆ ಆಡಳಿತದಲ್ಲಿ ಕನ್ನಡ ವ್ಯವಹರಿಸಲು ಅನುಕೂಲವಾಗುವಂತೆ ಆಡಳಿತ ಕನ್ನಡ ಕಾರ್ಯ ಶಿಬಿರ ನಡೆಸುತ್ತಿದೆ.

2. ಮಹಾಲೇಖಾಪಾಲರ ಕಚೇರಿ ಸಿಬ್ಬಂದಿ ನ್ಯಾಯಾಂಗದ ಅಧಿಕಾರಿ ಹಾಗೂ ನೌಕರರು, ನೋಟರಿಗಳಿಗೆ ಕನ್ನಡ ಕಾರ್ಯ ಶಿಬಿರಗಳು ನಡೆಸುತ್ತಿದೆ.

3. ಆಯಾ ಕ್ಷೇತ್ರದ ಅಧಿಕಾರಿ, ನೌಕರರನ್ನು ಒಂದೆಡೆ ಸೇರಿ ಚರ್ಚೆ, ಸಂವಾದಗಳ ಮೂಲಕ ಕನ್ನಡ ಬಳಕೆಗೆ ಮನವರಿಕೆ ಮಾಡಿಕೊಡುವಂಥ ಆಡಳಿತ ಕನ್ನಡ ಕಮ್ಮಟಗಳನ್ನು ನಡೆಸಲಾಗುತ್ತಿದೆ.

4. ಕನ್ನಡ ಬಾರದವರಿಗೆ ಕನ್ನಡ ಕಲಿಕೆ ಕಾರ್ಯಕ್ರಮ ಹಮ್ಮಿಕೊಂಡು 6ತಿಂಗಳ ಅವಧಿಯಲ್ಲಿ ಅರೆ ಸರ್ಕಾರಿ, ಸ್ಥಳೀಯ ಸಂಸ್ಥೆ, ಸಾರ್ವಜನಿಕ ಸಂಘಸಂಸ್ಥೆಗಳಿಗೆ 3 ಹಂತದಲ್ಲಿ ಮಾತು ಬರಹ - ಓದುಗಳ ಬಗ್ಗೆ ತರಬೇತಿ ನೀಡಲಾಗುತ್ತಿದೆ.

5. ಅಂಚೆ ಮೂಲಕ ಕನ್ನಡ ಕಲಿಕೆ ಕಾರ್ಯಕ್ರಮದಲ್ಲಿ ಮೈಸೂರಿನ ಭಾರತೀಯ ಭಾಷೆಗಳ ಕೇಂದ್ರ ಸಂಸ್ಥೆಯ ಸಹಕಾರದೊಂದಿಗೆ ಆಡಳಿತ ವ್ಯವಹಾರಗಳನ್ನು ಕನ್ನಡದಲ್ಲಿ 10 ತಿಂಗಳ ಅವಧಿಯಲ್ಲಿ ಅಂಚೆ ಮೂಲಕ ಕನ್ನಡ ಕಲಿಸಲಾಗುವುದು. ರಾಜ್ಯ, ಕೇಂದ್ರ, ಬ್ಯಾಂಕ್ ಕಾರ್ಖಾನೆಯ ಎಲ್ಲಾ ಸಿಬ್ಬಂದಿಗೆ ಈ ಸೌಲಭ್ಯ ವಿಸ್ತರಿಸಲಾಗಿದೆ.

6. ಆಕಾಶವಾಣಿ, ದೂರದರ್ಶನ ಮೂಲಕ ಕನ್ನಡ ಬಾರದವರಿಗೆ ಕನ್ನಡ ಕಲಿಸುವ ಕಾರ್ಯ ಯೋಜನೆಯಡಿ ಕನ್ನಡ- ಕನ್ನಡಿ ಧಾರವಾಹಿ ಪ್ರಸಾರ ಮಾಡಲು ಕ್ರಮ ಕೈಗೊಂಡಿದೆ.

7. ಎಲ್ಲಾ ಕಚೇರಿಗಳಿಗೆ ಕನ್ನಡ ಬಳಕೆಗೆ ಅನುಕೂಲವಾಗುವ ಪೂರಕ ಸಾಹಿತ್ಯವನ್ನು ಉಚಿತವಾಗಿ ಒದಗಿಸಲಾಗುತ್ತದೆ. ಅದರಲ್ಲಿ ಮಾದರಿ ಕಚೇರಿ ಕೈಪಿಡಿ, ಆಡಳಿತ ಪದಕೋಶ, ಕಾನೂನು ಪದಕೋಶ, ಇಲಾಖಾ ಪಾರಿಭಾಷಿಕ ಪದಕೋಶಗಳು ಮುಂತಾದ ಸಹಾಯಕ ಗ್ರಂಥಗಳನ್ನು ಸಿದ್ಧ ಮಾಡಿ ಸರಬರಾಜು ಮಾಡುತ್ತಿದೆ.

8. ಶಿಕ್ಷಣ ಹಂತದಲ್ಲಿ ಕನ್ನಡ ವಾತಾವರಣವನ್ನು ಉಂಟು ಮಾಡುವ ಉದ್ದೇಶದಿಂದ ಕನ್ನಡ ಮಾಧ್ಯಮದಲ್ಲಿ ಓದುತ್ತಿರುವ ಪದವಿ, ಪಿ.ಯು.ಸಿ, ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ನೀಡಿ ಪ್ರೋತ್ಸಾಹಿಸುತ್ತಿದೆ (ಕಳೆದ 2 ವರ್ಷಗಳಿಂದ ಸ್ಥಗಿತಗೊಂಡಿದೆ)

9. ಕನ್ನಡ ಬೆರಳಚ್ಚು ಹಾಗೂ ಶೀಘ್ರಲಿಪಿ ತರಬೇತಿಗಾಗಿ ಪ್ರೋತ್ಸಾಹ ಧನ ಸಹಾಯ ಮಾಡುತ್ತಿದೆ.

10. ನಿರುದ್ಯೋಗಿ ಕನ್ನಡ ಬೆರಳಚ್ಚುಗಾರರಿಗೆ ಬೆರಳಚ್ಚು (ಕನ್ನಡ) ಯಂತ್ರ ಖರೀದಿ ಮಾಡಲು ಪ್ರೋತ್ಸಾಹ ಧನ ಸಹಾಯ ನೀಡುತ್ತಿದೆ. (ಸಧ್ಯಕ್ಕೆ ಸ್ಥಗಿತ ಮಾಡಿದೆ)

11. ಆಡಳಿತ ಕನ್ನಡ ಕುರಿತು ಜನಸಾಮಾನ್ಯರೂ ಸೇರಿದಂತೆ ಸರ್ಕಾರಿ ನೌಕರರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ರಾಜ್ಯಾದ್ಯಂತ ಜಾಗೃತಿ ಶಿಬಿರಗಳನ್ನು ನಡೆಸಲಾಗುತ್ತಿದೆ.

12. ಕನ್ನಡ ಬೆರಳಚ್ಚು ಯಂತ್ರಗಳನ್ನು ಸರ್ಕಾರಿ ಕಚೇರಿಗಳಿಗೆ ಸರ್ಕಾರಿ ಮುದ್ರಣಾಲಯವು ಸರಬರಾಜು ಮಾಡುತ್ತಿದೆ.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ: ಮಾನ್ಯ ಅಧ್ಯಕ್ಷರೆ, ಸಂಸ್ಕೃತಿ ಮತ್ತು ಕನ್ನಡ ಕನ್ನಡಿಗರ ಎರಡು ಕಣ್ಣು ಇದ್ದ ಹಾಗೆ. ಈ ಖಾತೆಯಲ್ಲಿ ಇಲ್ಲಿಯವರೆಗೆ ಸುಮಾರು 14 ಜನರು ಮಂತ್ರಿಗಳಾಗಿ ಮುಂದುವರೆದಿದ್ದಾರೆ. ಆಡಳಿತದಲ್ಲಿ ಕನ್ನಡವನ್ನು ಜಾರಿಗೊಳಿಸುವ ಬಗ್ಗೆ ಇಲಾಖೆ ಪ್ರಾರಂಭಗೊಂಡಾಗಿನಿಂದ ಇಲ್ಲಿಯವರೆಗೆ 200ರಿಂದ 300 ಸುತ್ತೋಲೆಯನ್ನು ಹೊರಡಿಸಲಾಗಿದೆ ಎಂದು ಹೇಳುತ್ತಾರೆ. ಆ ಸುತ್ತೋಲೆ ಸುತ್ತೋಲೆಯಾಗಿ ಉಳಿದಿದೆಯೇ ವಿನಹ ಕನ್ನಡದ ಬಗ್ಗೆ ಕನ್ನಡದ ಕಂಪು, ಇಂಪು, ತಂಪು ಎಂದು ಹೇಳುವಂಥ ರಾಷ್ಟ್ರಕವಿ ಕುವೆಂಪು ಅವರ ಕಂತ ಹಾಳಾಗಿ ಹೋಗಿದೆಯೇನೋ ಎನ್ನುವಂಥ ಭಾವನೆ ಬರುತ್ತಿದೆ.

> ''ಕನ್ನಡಕ್ಕಾಗಿ ನೀ ಕೈಯೆತ್ತು ನಿನ್ನ ಕೈ ಕಲ್ಪವೃಕ್ಷ ಆಗುವುದು,
> ಕನ್ನಡಕ್ಕಾಗಿ ಕರುಬೆರಳೆತ್ತಿದ್ದರೆ ಅದು ಗೋವರ್ಧನ ಗಿರಿಧಾರೆಯಾಗುತ್ತದೆ''

ಎನ್ನತಕ್ಕಂಥ ಕುವೆಂಪು ಅವರ ಕವನ ಇವತ್ತು ಎಲ್ಲಿ ಹೋಯಿತು ? ಐ.ಎ.ಎಸ್. ಅಧಿಕಾರಿಗಳು ಆಡಳಿತದಲ್ಲಿ ಕನ್ನಡವನ್ನು ಉಪಯೋಗಿಸದಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಿ. ಅವರಿಗೆ ಏನಾದರೂ ಹೇಳಿದರೆ ಅವರದೇ ಒಂದು ಧಾಟಿ ಇರುತ್ತದೆ. ಇದು ಸರಿಯೇ? ಇದು ಕನ್ನಡದ ಬಗ್ಗೆ ಇರತಕ್ಕಂಥ ಕಾಳಜಿಯೇ? ಕರ್ನಾಟಕ ರಾಜ್ಯದಲ್ಲಿನ ವೋಟರ್ ಲಿಸ್ಟ್‌ನಲ್ಲಿ ತಮಿಳು ಭಾಷೆ ಪ್ರಿಂಟ್ ಆಗಿದೆ. ಎಷ್ಟು ಜನ ನಮ್ಮ ಕನ್ನಡದ ಬಗ್ಗೆ ಕಾಳಜಿ ವಹಿಸಿದ್ದಾರೆ? ಆಡಳಿತದ ಎಲ್ಲರ ಎಲ್ಲಾ ಕನ್ನಡದಲ್ಲಿ ಇದ್ದದ್ದು ಆ ಫಲಕಗಳೆಲ್ಲ ಎಲ್ಲಿ ಹೋದವು? ಇದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀಮತಿ ರಾಣಿ ಸತೀಶ್: ಮಾನ್ಯ ಅಧ್ಯಕ್ಷರೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಕನ್ನಡದ ಬಗ್ಗೆ ಕಾಳಜಿ ವಹಿಸುವಂಥ ಜವಾಬ್ದಾರಿ ಇದೆ. ಕನ್ನಡದ ಕಂಪನ್ನು ಇಡೀ ಕರ್ನಾಟಕದಲ್ಲಿ ಹರಡತಕ್ಕಂಥ ನಿಟ್ಟಿನಲ್ಲಿ ಈ ಇಲಾಖೆ ಕೆಲಸ ಮಾಡುತ್ತಿದೆ. ಕನ್ನಡವನ್ನು ಬಳಸುತ್ತಿಲ್ಲವೆಂದು ಅಧಿಕಾರಿಗಳ ಬಗ್ಗೆ ಮಾನ್ಯ ಸದಸ್ಯರು ಹೇಳಿದರು. ಇಲಾಖಾ ಮುಖ್ಯಸ್ಥರುಗಳಿಂದ ಕನ್ನಡದ ಬಳಕೆ ಆಗಬರತಕ್ಕಂಥ ಸಂದರ್ಭದಲ್ಲಿ ಇದರ ಬಗ್ಗೆ ಕಾನೂನಿನ ಅಡಿಯಲ್ಲಿ ಕ್ರಮ ತೆಗೆದುಕೊಳ್ಳಬೇಕೆಂದು ಇರುವುದರಿಂದ, ಆಡಳಿತದಲ್ಲಿ ಕನ್ನಡದ ಬಳಕೆ ಸಮಗ್ರವಾಗಿ ಆಗಬೇಕೆಂದು ನಾವು ಅನೇಕ ಬಾರಿ ಅವರಿಗೆ ಸೂಚನೆಗಳನ್ನು ಕೂಟ್ಟಿದ್ದೇವೆ. 1977-78ರಿಂದ ನಿರಂತರವಾಗಿ ಈ ಖಾತೆಯನ್ನು ಪ್ರತ್ಯೇಕ ಸಚಿವರು ನಿರ್ವಹಣೆ ಮಾಡುತ್ತಿದ್ದಾರೆ. ಇದನ್ನು ನಿರ್ವಹಿಸತಕ್ಕಂಥ ಜವಾಬ್ದಾರಿ ಇನ್ನು ಮುಂದೆಯೂ ಇದೆ. ಅದನ್ನು ನಿರಂತರವಾಗಿ ನಿರ್ವಹಿತಕ್ಕಂತ ಹೊಣೆಗಾರಿಕೆಯನ್ನು ನಾವು ತೆಗೆದುಕೊಂಡಿದ್ದೇವೆ ಎನ್ನುವ ಮಾತನ್ನು ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ: ಮಾನ್ಯ ಅಧ್ಯಕ್ಷರೆ, ಕನ್ನಡ ಅರಿಯದ ಮತ್ತು

ಕಲಿಯದ ಎಷ್ಟು ಜನ ಅಧಿಕಾರಿಗಳನ್ನು ಅಮಾನತ್ತಿನಲ್ಲಿಟ್ಟಿದ್ದೀರಿ?.... ಕುವೆಂಪು ಡಿ.ವಿ.ಜಿ. ಅಲ್ಲಮಪ್ರಭು ಇವರೆಲ್ಲರ ಬಗ್ಗೆ ಸಾಕಷ್ಟು ತಿಳಿದುಕೊಂಡಿದ್ದೇನೆ. ಇವರ ಕವನ, ವಚನಗಳನ್ನು ಓದಿ ಕರತಲಾಮಲಕ ಮಾಡಿಕೊಂಡಿದ್ದೇನೆ. ಮಾನ್ಯ ಕೃಷ್ಣ ಅವರು ಒಪ್ಪಿದರೆ ಅವರ ಬಗ್ಗೆ ಒಂದು ಕವನವನ್ನು ಈಗಲೇ ಹೇಳಿಬಿಡಲೇ? ಮಾನ್ಯ ಮುಖ್ಯಮಂತ್ರಿಗಳು ಒಪ್ಪಿಗೆ ಕೊಟ್ಟರೆ ಒಂದೇ ಒಂದು ಕವನವನ್ನು ಅವರ ಬಗ್ಗೆ ಹೇಳಿ ಬಿಡುತ್ತೇನೆ.

ಶ್ರೀ ಎಸ್.ಎಂ.ಕೃಷ್ಣ: ದಯವಿಟ್ಟು ಬೇಡ, ವಿಷಯಕ್ಕೆ ಸಂಬಂಧಪಟ್ಟ ಹಾಗೆ ಸಂಬಂಧಪಟ್ಟವರಿಗೆ ಪ್ರಶ್ನೆಯನ್ನು ಕೇಳಿ.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ: ಮಾನ್ಯ ಅಧ್ಯಕ್ಷರೆ, ಕನ್ನಡದ ಕೆಲಸವನ್ನು ಮಾಡದೇ ಇರತಕ್ಕಂಥ ಎಷ್ಟು ಜನ ಅಧಿಕಾರಿಗಳನ್ನು ವಾಪಸ್ಸು ಕಳುಹಿಸಿದ್ದೀರಿ? ಮತದಾರರ ಪಟ್ಟಿ ತಮಿಳು ಭಾಷೆಯಲ್ಲಿ ಮುದ್ರಿತವಾಗಿದೆ. ಅದು ಕನ್ನಡಕ್ಕೆ ಕೊಡತಕ್ಕಂಥ ಪ್ರಾತಿನಿಧ್ಯವೇ? ಎಷ್ಟು ಜನರ ಮೇಲೆ ಕ್ರಮ ತೆಗೆದುಕೊಂಡಿದ್ದೀರಿ? ನಮ್ಮ ಮಾನ್ಯ ಮುಖ್ಯಮಂತ್ರಿಯವರು ಅಪ್ಪಟ ಕನ್ನಡಿಗರು. ಕನ್ನಡದಲ್ಲಿ ಮಾತನಾಡದೇ ಇರತಕ್ಕಂಥ ಸದಸ್ಯರುಗಳ ಮೇಲೆ ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ? ಅವರಿಗೆ ಏನಾದರೂ ತಿಳುವಳಿಕೆ ನೀಡಿದ್ದೀರಾ? ದಯಮಾಡಿ ಇದರ ಬಗ್ಗೆ ಸಂಬಂಧಪಟ್ಟ ಮಾನ್ಯ ಸಚಿವರು ಸದನಕ್ಕೆ ತಿಳಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀಮತಿ ರಾಣಿ ಸತೀಶ್: ಆಡಳಿತದಲ್ಲಿ ಕನ್ನಡ ಬಳಕೆ ಬಗ್ಗೆ ಈಗಾಗಲೇ ಕನ್ನಡ ಅಭಿವೃದ್ಧಿ ಪ್ರಾಧಿಕಾರವನ್ನು ರಚಿಸಿದ್ದು, ಗಡಿನಾಡು ಅಧ್ಯಯನ ಆಯೋಗವನ್ನೂ ಮಾನ್ಯ ಮುಖ್ಯಮಂತ್ರಿಗಳು ರಚಿಸಿ, ಕನ್ನಡಕ್ಕೆ ಹೆಚ್ಚು ಪ್ರಾತಿನಿಧ್ಯ ಕೊಡುವ ನಿಟ್ಟಿನಲ್ಲಿ ಕ್ರಮ ಕೈಗೊಂಡಿದ್ದಾರೆ. ನೀವು ಹೇಳಿದ ಹಾಗೆ, ಅಧಿಕಾರಿಗಳು ಕನ್ನಡ ಬಳಕೆ ಮಾಡದಿದ್ದರೆ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧಿನಿಯಮದಂತೆ ಕನ್ನಡ ಬಳಕೆಯಾಗದಿರುವುದು ಕರ್ತವ್ಯಲೋಪವೆಂದು ಪರಿಗಣಿಸಲಾಗಿದೆ. ಆದರೆ, ಇದುವರೆಗೆ ಯಾವುದೇ ರೀತಿಯ ದೂರು ನಮಗೆ ಬಂದಿಲ್ಲದ ಕಾರಣ, ಕ್ರಮ ತೆಗೆದುಕೊಂಡಿಲ್ಲವೆಂಬ ಮಾತನ್ನು ಹೇಳುತ್ತೇನೆ. ಸದಸ್ಯರು ಕನ್ನಡ ಬಳಕೆ ಮಾಡಬೇಕೆನ್ನುವ ನಿಟ್ಟಿನಲ್ಲಿ ನಾನು ಹಲವಾರು ಸಾರಿ ಸಚಿವೆಯಾದ ನಂತರ ಮಾನ್ಯ ಗೌರವಾನ್ವಿತ ಸದಸ್ಯರಿಗೆ, ಮಂತ್ರಿಗಳಿಗೆ ಈಗಾಗಲೇ ಅವರಿಂದ ನಿರೀಕ್ಷಣೆ ಮಾಡುವುದಕ್ಕೆ ಸಹಕಾರ ಕೇಳಿದ್ದೇನೆ. ಅಧಿಕಾರಿಗಳಿಗೆ ಮತ್ತು ಮುಖ್ಯ ಕಾರ್ಯದರ್ಶಿಗಳಿಗೂ ಸಹ ಇದರ ಬಗ್ಗೆ ನಾನು ಹಲವಾರು ಸಾರಿ ಹೇಳುವ ನಿಟ್ಟಿನಲ್ಲಿ ನಾವು ಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ಎನ್.ಯೋಗೀಶ್ ಭಟ್: ಸದಸ್ಯರು ಕೇಳಿದ (ಇ) ಪ್ರಶ್ನೆಗೆ ಮಂತ್ರಿಗಳು ಉತ್ತರಿಸಿದ್ದಾರೆ. ನನ್ನ ಪ್ರಶ್ನೆ ಎಂದರೆ, ಮೊನ್ನೆ ನಡೆದ ಉಳ್ಳಾಲ ಉರುಸ್ ಕಾರ್ಯಕ್ರಮದ ಸಂದರ್ಭದಲ್ಲಿ ಅಲ್ಲಿಗೆ ಮಾನ್ಯ ಕಂದಾಯ ಸಚಿವರು ಬಂದಿದ್ದರು.

ಅಲ್ಲಿ ಜಿಲ್ಲಾಧಿಕಾರಿ ಸಹ ಇದ್ದರು. ಕುಡಿಯುವ ನೀರಿನ ಸಮಸ್ಯೆಗೆ ಸಂಬಂಧಿಸಿದಂತೆ 10-15 ನಿಮಿಷ ಚರ್ಚೆಯಾಯಿತು. ಸಾರ್ವಜನಿಕವಾಗಿ ಎಲ್ಲರ ಸಮಕ್ಷಮದಲ್ಲಿ ನಡೆದ ಘಟನೆ ಹೇಳುತ್ತಿದ್ದೇನೆ. ಇಂಗ್ಲೀಷ್‌ನಲ್ಲಿ ಕೇಳಿದ ಪ್ರಶ್ನೆಗೆ ಜಿಲ್ಲಾಧಿಕಾರಿಗಳು ಪೂರ್ಣವಾಗಿ ಕನ್ನಡದಲ್ಲಿ ಉತ್ತರಿಸುತ್ತಿದ್ದರು. ಅಧಿಕಾರಿಗಳಿಗೆ ಮಾತ್ರ ಕನ್ನಡ ಕಡ್ಡಾಯವೇ, ಮಂತ್ರಿಗಳಿಗೂ ಸಹ ಅನ್ವಯವೇ? ಈ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ?

ಅಧ್ಯಕ್ಷರು: ಕನ್ನಡ ಎಲ್ಲರಿಗೂ ಕಡ್ಡಾಯ.

ಶ್ರೀಮತಿ ರಾಣಿ ಸತೀಶ್: ಮಾನ್ಯ ಸದಸ್ಯರು ಹೇಳಿದ ಹಾಗೆ, ಈ ನಿಟ್ಟನಲ್ಲಿ ಹಲವಾರು ಸಾರಿ ಮಂತ್ರಿಗಳು ಕನ್ನಡದಲ್ಲಿ ಹೇಳುವುದನ್ನು, ಇಂಗ್ಲೀಷ್‌ನಲ್ಲಿ ಹೇಳುವ ಅಧಿಕಾರಿಗಳನ್ನೂ ನಾವು ನೋಡಿದ್ದೇವೆ. ಇದರಲ್ಲಿ ಎಲ್ಲರ ಜವಾಬ್ದಾರಿ ಇದೆ. ಅಧಿಕಾರಿಗಳು ಹಾಗೂ ಸಚಿವರು, ಸದಸ್ಯರು ಎಲ್ಲರ ಜವಾಬ್ದಾರಿ ಈ ನಿಟ್ಟನಲ್ಲಿದೆ ಎಂದು ಹೇಳುತ್ತಾ, ಸಚಿವರು ಇನ್ನು ಮುಂದೆ ಕನ್ನಡ ಬಳಕೆ ಮಾಡುವ ನಿಟ್ಟನಲ್ಲಿ ಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಮಂತ್ರಿಗಳು ಕೊಟ್ಟಿರುವ ಉತ್ತರದಲ್ಲಿ ಅನುಬಂಧ(6)ನ್ನು ನೋಡಿದೆ. ಮುಖ್ಯಮಂತ್ರಿಗಳು, ಹೇಳಿಕೆ ಕೊಟ್ಟದ್ದಾರೆ. ದೂರದರ್ಶನದಲ್ಲಿ ಕನ್ನಡದಲ್ಲಿ ಸುದ್ದಿ ಮತ್ತು ಇತರೆ ವಿಚಾರಗಳನ್ನು ಪ್ರಸಾರ ಮಾಡುವ ವಿಚಾರದಲ್ಲಿ ಸುಮಾರು ಅರ್ಧ ಗಂಟೆ ಸಮಯ ಕಡಿತವಾಗಿದೆ. ಎಲ್ಲ ಪ್ರಾದೇಶಿಕ ಭಾಷೆಗಳಿಗೂ ಕಡಿತ ಮಾಡಿದ್ದು, ಇದು ದೊಡ್ಡ ಅನ್ಯಾಯ. ಅದರಲ್ಲೂ ಕರ್ನಾಟಕದಲ್ಲಿ ದೂರದರ್ಶನದಲ್ಲಿ ಸಮಯವನ್ನು ಕಡಿಮೆ ಮಾಡಿರುವುದು ಸರಿಯಲ್ಲ. ನಾವು ಕೇಂದ್ರಸರ್ಕಾರದ ವಾರ್ತಾ ಇಲಾಖೆ ಮಂತ್ರಿಗಳಿಗೂ ಹೇಳಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳೂ ಪತ್ರ ಬರೆದಿದ್ದೇವೆಂದು ಹೇಳಿದ್ದಾರೆ. ಆ ಪತ್ರಕ್ಕೆ ಕೇಂದ್ರಸರ್ಕಾರ ಸ್ಪಂದಿಸಿದೆಯೇ? ಇಲ್ಲದಿದ್ದರೆ, ಮುಂದೆ ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ? ದೂರದರ್ಶನ ಬಹಳ ಮಹತ್ವವಾದ ಮಾಧ್ಯಮ. ಅದರಲ್ಲಿ ಕನ್ನಡಕ್ಕೆ ಆದ್ಯತೆ ಸಿಗಲಿಲ್ಲವೆಂದರೆ ಇದು ಎಲ್ಲರಿಗೂ ಸಹ ಅವಮಾನಕರ ವಿಚಾರ. ಮಾನ್ಯ ಮುಖ್ಯಮಂತ್ರಿಗಳು ಈ ವಿಚಾರದಲ್ಲಿ ಸರ್ಕಾರದ ಕಾರ್ಯಕ್ರಮವೇನೆಂಬ ಬಗ್ಗೆ ತಿಳಿಸಲು ಸಾಧ್ಯವೇ?

ಶ್ರೀ ಎಸ್.ಎಂ.ಕೃಷ್ಣ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೇ, ಈ ಬಗ್ಗೆ ನಾನು ಕೇಂದ್ರಸರ್ಕಾರದ ವಾರ್ತಾ ಇಲಾಖೆಯ ಸಚಿವರ ಗಮನ ಸೆಳೆದಿದ್ದೇನೆ. ಇದು ನಮ್ಮ ಫೆಡರಲ್ ಸೆಟ್-ಅಪ್‌ನಲ್ಲಿ ರಾಜ್ಯ ಮತ್ತು ಕೇಂದ್ರದ ಸಂಬಂಧದ ಮೇಲೆ ಪ್ರಮುಖವಾದ ಪ್ರಭಾವವನ್ನು ಬೀರುವ ವಿಚಾರ. ನಿಜ; ದೂರದರ್ಶನ ಕೇಂದ್ರ ಸರ್ಕಾರದ ಅಧೀನಕ್ಕೆ ಬರುವ ಇಲಾಖೆ. ಆದರೆ, ಈ ರಾಷ್ಟ್ರದ ಸಾರ್ವಜನಿಕರು ದೂರದರ್ಶನದ ಜೊತೆಯಲ್ಲಿ ಬಹಳ ನಿಕಟವಾದ ಸಂಬಂಧವನ್ನು

ಪಡೆದುಕೊಂಡಿದ್ದಾರೆ. ಆದ್ದರಿಂದ, ಇದಕ್ಕೆ ಹೆಚ್ಚಿನ ಮಹತ್ವ ಬಂದಿದೆ. ಇದರಲ್ಲಿ ರಾಜಕೀಯ ಇಲ್ಲ ಹಾಗೆ ಎಂದು ನಾನು ಭಾವಿಸುತ್ತೇನೆ. ಕನ್ನಡದ ಭಾಷೆ ಬಗ್ಗೆ, ಕನ್ನಡ ನಾಡಿನಲ್ಲಿರುವವರ ಅಭಿಮಾನದ ಬಗ್ಗೆ ಕೇಂದ್ರಸರ್ಕಾರ ಇನ್ನೂ ಹೆಚ್ಚಿನ ಅಫ್ರಿಷಿಯೇಟಿವ್ ಆಗಿರಬೇಕಾದುದು, ಅದಕ್ಕೆ ಸ್ಪಂದಿಸಬೇಕಾಗಿರುವುದು ಅವರ ಮೇಲೆ ಬಿದ್ದಿರುವ ಪ್ರಮುಖವಾದಂತಹ ಜವಾಬ್ದಾರಿ ಎಂದು ಭಾವಿಸುತ್ತೇನೆ. ಹೆಚ್ಚು ಕಠಿಣವಾದ ಶಬ್ದಗಳನ್ನುಪಯೋಗಿಸುವ ಮೂಲಕ ನಾನು ಕೇಂದ್ರಸರ್ಕಾರವನ್ನು ಇಕ್ಕಟ್ಟಿಗೆ ಸಿಕ್ಕಿಸುವ ಪ್ರಯತ್ನವನ್ನು ಮಾಡಲು ಈ ಸದನವನ್ನು ನಾನು ಉಪಯೋಗಿಸಿಕೊಳ್ಳುವುದಿಲ್ಲ. ಏಕೆಂದರೆ, ಕೇಂದ್ರಸರ್ಕಾರಕ್ಕೂ ಕೂಡ ಇತಿಮಿತಿಗಳಿವೆ ಎನ್ನವುದನ್ನು ನಾನು ಬಲ್ಲೆ. ಆದ್ದರಿಂದ, ಅತಿ ಶೀಘ್ರದಲ್ಲಿ ಈ ಅಧಿವೇಶನ ಮುಗಿದ ನಂತರ, ಕೇಂದ್ರದ ವಾರ್ತಾ ಇಲಾಖಾ ಮಂತ್ರಿಗಳನ್ನು ಭೇಟಿ ಮಾಡಿ, ಕನ್ನಡಿಗರಿಗಾಗಿರುವ ಅನ್ಯಾಯವನ್ನು ಅದರಲ್ಲಿ ದಾಖಲಿಸಲು ಸಮಯ ಉಪಯೋಗಿಸಿಕೊಳ್ಳುತ್ತೇನೆ.

ಶ್ರೀ ಆರಗ ಜ್ಞಾನೇಂದ್ರ: ಮಾನ್ಯ ಸದಸ್ಯರು ಕನ್ನಡ ಭಾಷೆ ಕಡ್ಡಾಯಗೊಳಿಸುವ, ಜಾರಿಗೆ ತರುವ ಬಗ್ಗೆ ಸ್ಪಷ್ಟವಾದ ಪ್ರಶ್ನೆ ಕೇಳಿದ್ದಾರೆ. ಆ ಬಗ್ಗೆ ಇಲ್ಲಿಯವರೆಗೆ 300 ಸುತ್ತೋಲೆಗಳನ್ನು ಹೊರಡಿಸಲಾಗಿದೆ. ಈ ಸುತ್ತೋಲೆ ಹೊರಡಿಸುವುದಕ್ಕೆ ಒಂದು ಮಂತ್ರಿ ಪದವಿ ಇದೆಯೇ? ಅದು ಏಕೆ ಬೇಕು? ಕೇವಲ ಪದೇ ಪದೇ ಸುತ್ತೋಲೆ ಹೊರಡಿಸುವುದಲ್ಲ; ಸುತ್ತೋಲೆ ಒಂದು ಸಾರಿ, ಸೂಚನೆ ಒಂದು ಸಾರಿ ಸರ್ಕಾರದಿಂದ ಹೋಗಬೇಕು. ಸರ್ಕಾರದ ಕಾರ್ಯಕ್ರಮವನ್ನು ಅರ್ಥ ಮಾಡಿಕೊಂಡು ಕೆಲಸ ಮಾಡಲಿಲ್ಲವೆಂದರೆ, ಅಂಥವರ ಮೇಲೆ ಕಠಿಣ ಕ್ರಮ ತೆಗೆದುಕೊಳ್ಳುವ ಅಧಿಕಾರ ಅವರಿಗಿರಬೇಕು. ಇಲ್ಲದಿದ್ದರೆ, ಕನ್ನಡ ಕಡ್ಡಾಯವಾಗಬೇಕು ಎಂಬುದು ಬರೀ ಭಾಷಣವಾಗುತ್ತದೆ. ಮಂತ್ರಿಗಳಾಗಲಿ ಸರ್ಕಾರವಾಗಲಿ ನಿಶ್ಚಿತವಾದ ಕಾರ್ಯಕ್ರಮ ಹಾಕಿಕೊಂಡಿದ್ದಾರೆಯೇ? ಮುಖ್ಯ ಕಾರ್ಯದರ್ಶಿಗಳಿಂದ ಹೊರಡುವ ಎಲ್ಲ ಸುತ್ತೋಲೆಗಳೂ ಹೆಚ್ಚು ಕಡಿಮೆ ಇಂಗ್ಲೀಷ್‌ನಲ್ಲಿ ಇರುತ್ತದೆ. ವಿಧಾನ ಸೌಧವನ್ನೇ ಕನ್ನಡ ಮಾಡದಿದ್ದರೆ, ಉಳಿದ ಇಲಾಖಾ ಕಛೇರಿಗಳಲ್ಲಿ ಕನ್ನಡ ಭಾಷೆ ಕಡ್ಡಾಯವನ್ನಾಗಿ ಹೇಗ ಮಾಡುತ್ತೀರಿ? ಇದರ ಬಗ್ಗೆ ಕಠಿಣ ನಿರ್ಧಾರ, ಕಾನೂನು ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಗುರುಪ್ಪ ಬೆಲ್ಲದ್ ಚಂದ್ರಕಾಂತ್: ನಮ್ಮ ರಾಜ್ಯದ ಆಡಳಿತ ಭಾಷೆ ಕನ್ನಡವಿದ್ದಾಗ್ಯೂ ಸಹಿತ ಕೇವಲ ಸುತ್ತೋಲೆ ಮೇಲೆ ಸುತ್ತೋಲೆ ಕಳುಹಿಸುವುದರಿಂದ ಪ್ರಯೋಜನವಾಗುವುದಿಲ್ಲ. ಯಾವ ಅಧಿಕಾರಿಗಳು ಇಂಗ್ಲೀಷ್‌ನಲ್ಲಿ ಪತ್ರ ವ್ಯವಹಾರ ಮಾಡುತ್ತಾರೆ ಅಂಥವರ ಮೇಲೇನಾದರೂ ಕ್ರಮ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ, ಇದನ್ನು ಹೇಗ ಸರಿಪಡಿಸುವುದು? ಆಡಳಿತದ ಭಾಷೆ ಕನ್ನಡವೆನ್ನುವುದಕ್ಕೇನು ಬೆಲೆ ಇದೆ? ಈ ಇಲಾಖೆಯ ಮಂತ್ರಿಗಳು, ಕನ್ನಡ ಅಭಿವೃದ್ಧಿ ಪ್ರಾಧಿಕಾರವಿದ್ದೂ ಹೀಗಾದರೆ ಹೇಗೆ?

ಶ್ರೀಮತಿ ರಾಣಿ ಸತೀಶ್: ಮಾನ್ಯ ಸದಸ್ಯರು ಹೇಳಿದ ಹಾಗೆ, ಈ ಸುತ್ತೋಲೆ ಹೊರಡಿಸುವುದಕ್ಕೆ ಸಚಿವ ಸ್ಥಾನ ಸೀಮಿತವಾಗಿಲ್ಲ ಎಂಬ ಮಾತನ್ನು ಈ ಸಭೆಯೊಳಗೆ ನಾನು ಹೇಳುತ್ತಿದ್ದೇನೆ. ಕನ್ನಡ ಭಾಷೆ, ಸಂಸ್ಕೃತಿ, ಇತಿಹಾಸ, ಪರಂಪರೆ ಬಗ್ಗೆ ಹೆಚ್ಚು ಒತ್ತು ಕೊಡುವ, ಕಲೆ, ಇತಿಹಾಸದ ಬಗ್ಗೆ ಹೆಚ್ಚು ಒತ್ತು ಕೊಡುವ ನಿಟ್ಟಿನಲ್ಲಿ ಈ ಇಲಾಖೆ ಕೆಲಸ ಮಾಡುತ್ತಿದೆ. ಇದರಲ್ಲಿ ಕನ್ನಡ ಬಳಕೆಯೂ ಒಂದು ಮಹತ್ತರವಾದ ವಿಚಾರವಾಗಿರುವುದರಿಂದ, ಅದರ ಬಗ್ಗೆ ಹೆಚ್ಚು ಒತ್ತು ಕೊಡುವ, ಕನ್ನಡ ಭಾಷೆಯನ್ನು ಬೆಳಸಿ, ಉಳಿಸಲು, ಅದನ್ನು ಅನುಷ್ಠಾನಕ್ಕೆ ತರಲು, ಕ್ರಮ ಕೈಗೊಂಡಿದ್ದೇವೆ. ನಾನು ಈಗಾಗಲೇ ಹೇಳಿದಂತೆ, ಅಧಿಕಾರಿಗಳು, ಸಚಿವರು, ಸದಸ್ಯರೆಲ್ಲರೂ ಕನ್ನಡವನ್ನು ಬಳಸುವ ನಿಟ್ಟಿನಲ್ಲಿ ಸರ್ಕಾರ ಕಾನೂನು ಹೊರಡಿಸಿದರೆ ಸಾಲದು, ಸುತ್ತೋಲೆ ಹೊರಡಿಸಿದರೆ ಸಾಲದು, ಅದು ಎಲ್ಲ ಅಧಿಕಾರಿ ವರ್ಗದಲ್ಲಿ ಸಚಿವರ ವರ್ಗದಲ್ಲಿ, ಸದಸ್ಯರ ವರ್ಗದಲ್ಲಿ ಆತ್ಮಾಭಿಮಾನ, ಆತ್ಮ ವಿಶ್ವಾಸದಿಂದ ಬರುವ ವಿಚಾರ. ಕನ್ನಡ ಬಳಕೆಯನ್ನು ಕಾನೂನು ನಿಟ್ಟಿನಲ್ಲಿ ಮಾಡುತ್ತೇವೆನ್ನುವುದಕ್ಕಿಂತ ಹೆಚ್ಚು ನಮ್ಮ ಮನಸ್ಸಿನ ಭಾವನೆಗಳ ಮೇಲೆ ಕನ್ನಡಾಭಿಮಾನ ಎಲ್ಲರಲ್ಲೂ ಮೂಡಬೇಕಾಗಿದೆ. ಕನ್ನಡ ಅಭಿಮಾನ ಮೂಡಿಸುವ ಅಧಿಕಾರಿಗಳು, ಸದಸ್ಯರು, ನಾವು ಎಲ್ಲರ ಜವಾಬ್ದಾರಿ ಸರ್ಕಾರದ ಜೊತೆಗೆ ಇದೆ ಎನ್ನುತ್ತಾ, ಈ ನಿಟ್ಟನಲ್ಲಿ ಅಧಿಕಾರಿವರ್ಗದವರು ಎಲ್ಲಿ ಕನ್ನಡ ಬಳಕೆ ಮಾಡಿಲ್ಲವೆನ್ನುವ ವರದಿಯನ್ನು ತಾವು ಹೇಳಿದ ಮಾತಿನ ಮೇರೆಗೆ ಮತ್ತೊಮ್ಮೆ ಪರಿಶೀಲಿಸಿ, ಕ್ರಮ ತೆಗೆದುಕೊಳ್ಳುವ ವಿಚಾರ ಬಂದರೆ, ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ: ಮಾನ್ಯ ಅಧ್ಯಕ್ಷರೆ, ಕನ್ನಡ ಪುಸ್ತಕ ಪ್ರಾಧಿಕಾರ ದಿನೇ ದಿನೇ ಕುಂಟುತ್ತಿದೆ, ಇದಕ್ಕೆ ನೀಡುತ್ತಿರುವ ಅನುದಾನವನ್ನು ಸರ್ಕಾರ ಪ್ರತಿ ವರ್ಷ ಕಡಿತಗೊಳಿಸುತ್ತಿದೆ. ಇದಕ್ಕೆ ಶಾಶ್ವತ ಅನುದಾನ ಇರಬೇಕು. ಆತ್ಮ ವಿಕಾಸ ಪ್ರೇಮದಿಂದ ಸಾಧ್ಯ, ಜ್ಞಾನ ವಿಕಾಸ ಅಭ್ಯಾಸದಿಂದ ಸಾಧ್ಯ, ಜೀವನ ವಿಕಾಸ ಅನುಭವದಿಂದ ಸಾಧ್ಯ, ಎಲ್ಲವೂ ಸಾಧ್ಯ ಮನೋಬಲದಿಂದ ಎನ್ನುವ ಆತ್ಮವಿಶ್ವಾಸವನ್ನಿಟ್ಟುಕೊಂಡಿರುವ ನಾವು ಕನ್ನಡದ ಬಗ್ಗೆ ಆತ್ಮ ವಿಶ್ವಾಸವನ್ನು ಕಳೆದುಕೊಂಡಿದ್ದೇ ಆದರೆ ನಾವು ಕನ್ನಡಿಗರಾಗಿ ಹುಟ್ಟಿದ್ದೇ ತಪ್ಪು. ಕನ್ನಡ ಬೇಡ ಎಂದು ಯಾವ್ಯಾವ ಭಾಷೆ ಬೇಕೋ ಆ ಭಾಷೆಗಳನ್ನು ಸೇರಿಸಿಕೊಂಡು ಕನ್ನಡವನ್ನು ಕೊಲೆ ಮಾಡಿದ್ದೇವೆ. ದಯಮಾಡಿ ಈ ಕೆಲಸ ಮಾಡಬಾರದು. ನಾನು ಕನ್ನಡದ ಕಟ್ಟಾಭಿಮಾನಿಯಾಗಿರುವುದರಿಂದ, ಕನ್ನಡ ಮಾತೆಗೆ, ಜನತೆಗೆ ಏನಾದರೂ ಒಂದು ಚೂರು ಕುಂದು ಬಂದರೆ, ಕನ್ನಡ ಭಾಷೆಯ ಬಗ್ಗೆ ಏನಾದರೂ ಹಗುರವಾಗಿ ಮಾತನಾಡಿದರೆ ನಾನು ಆತ್ಮಹತ್ಯೆಯನ್ನು ಮಾಡಿಕೊಳ್ಳಲಿಕ್ಕೆ ತಯಾರಿದ್ದೇನೆ.

''ನುಡಿದರೆ ಮುತ್ತಿನ ಹಾರದಂತಿರಬೇಕು
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು
ನುಡಿದರೆ ಸ್ಪಟಿಕದ ಸಲಾಕೆಯಂತಿರಬೇಕು

ನುಡಿದರೆ ಲಿಂಗ ಮೆಚ್ಚ ಅಹುದಹುದೆನಬೇಕು
ನುಡಿಯೊಳಗಾಗಿ ನಡೆಯದಿರ್ದೊಡೆ
ಕೂಡಲ ಸಂಗಮದೇವನೆಂತೊಲಿವನಯ್ಯಾ?''

ಹೀಗೆಂದು ಶ್ರೀ ಬಸವಣ್ಣನವರು ಹೇಳಿದ್ದಾರೆ. ಹೀಗಾಗಿ ನಾವು ಎಲ್ಲರೂ ಕೂಡ, ನಮ್ಮ ನಡೆ, ನುಡಿ, ಎಲ್ಲವೂ ಕನ್ನಡಮಯವಾಗಿರಬೇಕು. 'ಎಲ್ಲಾದರೂ ಇರು, ಹೇಗಾದರೂ ಇರು, ಎಂದೆಂದಿಗೂ ನೀ ಕನ್ನಡವಾಗಿರು', ಎನ್ನುವ ಕವಿವಾಣಿಯಂತೆ, ಇಲ್ಲಿರುವ ಎಲ್ಲಾ ಮಾನ್ಯ ಸದಸ್ಯರು ಇದನ್ನು ಮೈಗೂಡಿಸಿಕೊಳ್ಳಬೇಕು. ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ರಾಣಿ ಸತೀಶ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕನ್ನಡ ಪುಸ್ತಕ ಪ್ರಾಧಿಕಾರದ ಬಗ್ಗೆ ಪ್ರಸ್ತಾಪಿಸಿ ತಾವು ಆತ್ಮಹತ್ಯೆಯನ್ನು ಮಾಡಿಕೊಳ್ಳುವುದಾಗಿ ಕೂಡ ಹೇಳಿದರು. ದಯಮಾಡಿ ತಾವು ಆತ್ಮಹತ್ಯೆ ಮಾಡಿಕೊಳ್ಳುವುದು ಬೇಡ, ಏಕೆಂದರೆ, ಅದು ಕನ್ನಡದ ಕೊಲೆಯಾಗುತ್ತದೆಂದು ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ. ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಅಭಿವೃದ್ಧಿ ನಿರ್ದೇಶನಾಲಯ, ಇವುಗಳ ಸಂಯುಕ್ತ ಆಶ್ರಯದಲ್ಲಿ ಕನ್ನಡ ಪುಸ್ತಕಗಳ ಪ್ರಕಟಣೆಗಳನ್ನು ಹೊರತರುವ ನಿಟ್ಟಿನಲ್ಲಿ ಅನುದಾನ ಕಡಿಮೆಯಾಗುತ್ತಿದೆಂದು ತಾವು ಏನು ಹೇಳಿದಿರಿ, ಈ ಸಂಸ್ಥೆಗಳು ತಮ್ಮದೇ ಆದ ಸ್ವಯಂ ಸಂಪನ್ಮೂಲಗಳನ್ನು ರಚನೆ ಮಾಡಿಕೊಂಡು ಆ ಮೂಲಕ ತಮ್ಮ ಉತ್ಪನ್ನಗಳನ್ನು ಹೆಚ್ಚು ಮಾಡುವುದರ ಜೊತೆಗೆ ಸಂಪನ್ಮೂಲಗಳನ್ನು ಹೆಚ್ಚು ಮಾಡಿಕೊಳ್ಳತಕ್ಕಂಥ ನಿಟ್ಟಿನಲ್ಲಿ ನಾವು ಈಗಾಗಲೇ ಮಾತನಾಡಿದ್ದೇವೆ. ಮತ್ತು ಇವರನ್ನೆಲ್ಲ ಒಗ್ಗೂಡಿಸಿ ಸಧ್ಯದಲ್ಲೇ ಇದರ ಬಗ್ಗೆ ಚರ್ಚೆ ಮಾಡಬೇಕು ಎನ್ನುವ ನಿಟ್ಟಿನಲ್ಲಿ ನಾವು ಈಗಾಗಲೇ ಕ್ರಮ ತೆಗೆದುಕೊಂಡಿದ್ದೇವೆಂದು ಹೇಳುತ್ತೇನೆ. ಕನ್ನಡದ ಮೇಲೆ ತಾವು ಇಟ್ಟಿರತಕ್ಕಂಥ ಅಭಿಮಾನಕ್ಕೆ ನಾನು ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಮೈಸೂರು ಸಕ್ಕರೆ ಕಾರ್ಖಾನೆಯಲ್ಲಿ ಕಬ್ಬಿನ ದರದ ನಿಗದಿ

282: (2890)

ಶ್ರೀ ಎಂ.ಎಸ್.ಆತ್ಮಾನಂದ (ಮಂಡ್ಯ): ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯದ ಮೈಸೂರು ಸಕ್ಕರೆ ಕಾರ್ಖಾನೆ ಈವರೆಗೆ ಅರೆದಿರುವ ಕಬ್ಬಿನ ಪ್ರಮಾಣವೆಷ್ಟು?